ನಿಯಮ-330

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ಇವರು ನಿಯಮ 330 ರಡಿ ಮಂಡಿಸಿರುವ ಸೂಚನೆಗೆ ಉತ್ತರ**

ವಿಷಯ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ ಆಗದೇ ಅನಧಿಕೃತವಾಗಿ ನಿರ್ಮಿಸಿರುವ ಎಲ್ಲಾ ರೆವಿನ್ಯೂ ನಿವೇಶನಗಳಿಗೆ ಸುಧಾರಣಾ ವೆಚ್ಚ / ಮೇಲ್ಪಾಟು ವೆಚ್ಚ ಪಾವತಿಸಿಕೊಂಡು ಖಾತಾ ನೊಂದಾಯಿಸಿಕೊಂಡು ಕ್ರಮಬದ್ಧ ಹಾಗೂ ಯೋಜನಾ ಬದ್ಧವಾಗಿ ರೂಪಿಸುವ ಸಂಬಂಧವಾಗಿ ಪ್ರಸ್ತಾವನೆ ಪಾಲಿಕೆಯಿಂದ ಸರ್ಕಾರಕ್ಕೆ ಬಂದಿರುವ ಬಗ್ಗೆ ಹಾಗೂ ಕರ್ನಾಟಕ ಲ್ಯಾಂಡ್ ರೆವಿನ್ಯೂ ಕಾಯ್ದೆ ಹಾಗೂ ಕರ್ನಾಟಕ ಕಂಟ್ರಿ ಮತ್ತು ಟೌನ್ ಪ್ಲ್ಯಾನಿಂಗ್ ಕಾಯ್ದೆ ಮತ್ತು ಕೆ.ಎಂ.ಸಿ ಕಾಯ್ದೆಗಳ ತಿದ್ದುಪಡಿ ತಂದು ರೆವಿನ್ಯೂ ಬಡಾವಣೆಗಳನ್ನು / ನಿವೇಶನಗಳನ್ನು ಕ್ರಮಬದ್ಧ ಹಾಗೂ ನಿಯಮಾನುಸಾರ ಖಾತಾ ನೊಂದಾಯಿಸಿಕೊಂಡು, ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಉಂಟಾಗಿರುವ ತೊಂದರೆಗಳನ್ನು ನಿವಾರಿಸಿ, ಸಾವಿರಾರು ಕಂದಾಯ ತುಂಡು ಭೂಮಿಯ ನಿವೇಶನಗಳನ್ನು ಸಕ್ರಮ ಮಾಡುವ ಯೋಜನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

ಉತ್ತರ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ ಆಗದೇ ಅನಧಿಕೃತವಾಗಿ ನಿರ್ಮಿಸಿರುವ ಎಲ್ಲಾ ರೆವಿನ್ಯೂ ನಿವೇಶನಗಳಿಗೆ ಸುಧಾರಣಾ ವೆಚ್ಚ / ಮೇಲ್ಪಾಟು ವೆಚ್ಚ ಪಾವತಿಸಿಕೊಂಡು ಕ್ರಮಬದ್ಧ ಹಾಗೂ ಯೋಜನಾ ಬದ್ಧವಾಗಿ ರೂಪಿಸುವ ಸಂಬಂಧವಾಗಿ ಪಾಲಿಕೆಯ ಪ್ರಸ್ತಾವನೆಗೆ ಕರ್ನಾಟಕ ಲ್ಯಾಂಡ್ ರೆವಿನ್ಯೂ ಕಾಯ್ದೆ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಮತ್ತು ಕೆ.ಎಂ.ಸಿ ಕಾಯ್ದೆಗಳಿಗೆ ತಿದ್ದುಪಡಿ ತಂದು ರೆವಿನ್ಯೂ ಬಡಾವಣೆ/ ನಿವೇಶನಗಳನ್ನು ಕ್ರಮಬದ್ಧ ಹಾಗೂ ನಿಯಮಾನುಸಾರ ಖಾತಾ ನೊಂದಾಯಿಸಿಕೊಂಡು, ಆಸ್ತಿತೆರಿಗೆ ವ್ಯಾಪ್ತಿಗೆ ಒಳಪಡಿಸಲು ಉಂಟಾಗಿರುವ ತೊಂದರೆಗಳನ್ನು ನಿವಾರಿಸಿ, ಸಾವಿರಾರು ಕಂದಾಯ ತುಂಡು ಭೂಮಿಯ ನಿವೇಶನಗಳನ್ನು ಸಕ್ರಮ ಮಾಡುವ ಯೋಜನೆ ಬಗ್ಗೆ ದಿನಾಂಕ: 27-12-2018 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯ ಸಂಖ್ಯೆ: 237/2018-19 ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

> "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರೆವಿನ್ಯೂ ನಿವೇಶನಗಳಿಗೆ (ಎನ್.ಜಿ.ಟಿ ಆದೇಶ/ತೀರ್ಪುಗಳ ಅನ್ವಯ ಕೆರೆಗಳು, ರಾಜಕಾಲುವೆ, ಗ್ರಾಮ ನಕ್ಷೆಯಲ್ಲಿ ಗುರುತಿಸಿರುವ ಗೋಮಾಳ, ಕಾಲುದಾರಿ, ಬಂಡಿದಾರಿ ಮತ್ತು ನಕಾಷೆ ರಸ್ತೆಗಳು, ಖರಾಬು ಜಾಗಗಳು, ಸರ್ಕಾರ ಅಥವಾ ಇತರೆ ಸರ್ಕಾರಿ ಜಾಗಗಳನ್ನು ಹೊರತುಪಡಿಸಿ) ಸ್ವತ್ತಿನ ಮಾಲೀಕರಿಂದ ಬಿ.ಬಿ.ಎಂ.ಪಿ.ಗೆ ಸುಧಾರಣಾ ವೆಚ್ಚ ಪಡೆದು, ಖಾತಾ ನೋಂದಾವಣೆ/ಖಾತಾ ವಿಭಜನೆ/ಖಾತಾ ಒಂದುಗೂಡಿಸುವಿಕೆ ಬಗ್ಗೆ ಸರ್ಕಾರದ ಆದೇಶವನ್ನು ನಿರೀಕ್ಷಿಸಿ ಕ್ರಮವಹಿಸಲು ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು."

ಸದರಿ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಕೋರಿ ದಿನಾಂಕ: 24-01-2019 ರಂದು ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ

ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 11-03-2019ರಂದು ನಡೆದ ಸಭೆಯ ನಡವಳಿಗಳಲ್ಲಿ ಬಿಬಿಎಂಪಿ ಅಧಿಕಾರಿಗಳು ಎ ಖಾತಾ ಮತ್ತು ಬಿ ಖಾತಾ ಕುರಿತಂತೆ ಕರಡು ನಿಯಮಾವಳಿಗಳನ್ನು ರೂಪಿಸುವ ಸಲುವಾಗಿ ವಿವಿಧ ಇಲಾಖೆಗಳನ್ನೊಳಗೊಂಡ ಸಮಿತಿ ರಚಿಸುವುದು ಸೂಕ್ತವೆಂದು ಅಭಿಪ್ರಾಯಿಸಿ, ಸಮಿತಿ ರಚನೆಗೆ ಅಗತ್ಯ ಪ್ರಸ್ತಾವನೆ ಸಲ್ಲಿಸುವಂತೆ ಆಯುಕ್ತರು, ಬಿಬಿಎಂಪಿರವರಿಗೆ ಸೂಚಿಸಲಾಗಿತ್ತು.

ಸದರಿ ಸೂಚನೆಯಂತೆ ಆಯುಕ್ತರು, ಬಿಬಿಎಂಪಿರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 55 ಎಂಎನ್‌ಯು 2019, ದಿನಾಂಕ: 12-07-2019 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಭೂಪರಿವರ್ತನೆ ಆಗದೆ ಇರುವ ರೆವಿನ್ಯೂ ಬಡಾವಣೆಗಳಲ್ಲಿನ ನಿವೇಶನಗಳಿಗೆ ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡು ಖಾತಾ ನೋಂದಾಯಿಸುವ ವಿಷಯಕ್ಕೆ ಸಂಬಂಧಿಸಿದಂತೆ ಎ ಖಾತಾ ಮತ್ತು ಬಿ ಖಾತಾ ಕುರಿತಂತೆ ಕರಡು ನಿಯಮಾವಳಿಗಳನ್ನು ರೂಪಿಸುವ ಸಲುವಾಗಿ ಆಯುಕ್ತರು (ಬಿಬಿಎಂಪಿ)ರವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ:-

| ಕ್ರ.ಸಂ | ಪದನಾಮ/ಇಲಾಖೆ | ಹುದ್ದೆ |
|---|---|---|
| 1 | ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಅಧ್ಯಕ್ಷರು |
| 2 | ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ | ಸದಸ್ಯರು |
| 3 | ಅಪರ ಕಾರ್ಯದರ್ಶಿಗಳು, ಕಾನೂನು ಇಲಾಖೆ, ವಿಧಾನ ಸೌಧ, ಬೆಂಗಳೂರು | ಸದಸ್ಯರು |
| 4 | ಸದಸ್ಯ ಅಭಿಯಂತರರು, ಬಿಡಿಎ | ಸದಸ್ಯರು |
| 5 | ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು | ಸದಸ್ಯರು |
| 6 | ಕಾನೂನು ಕೋಶದ ಮುಖ್ಯಸ್ಥರು, ಬಿಬಿಎಂಪಿ, ಬೆಂಗಳೂರು | ಸದಸ್ಯರು |
| 7 | ಜಂಟಿ ಆಯುಕ್ತರು (ಕಂದಾಯ), ಬಿಬಿಎಂಪಿ, ಬೆಂಗಳೂರು | ಸಂಚಾಲಕರು |

ಸದರಿ ಸಮಿತಿಯಿಂದ ಸರ್ಕಾರಕ್ಕೆ ನಿಯಮಗಳು ಸ್ವೀಕೃತವಾದ ನಂತರ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು.

---

**ಸಂಖ್ಯೆ: ನಅಇ 141 ಎಂಎನ್‌ಯು 2019**

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ